ಈ ರೋಸ್ಟರ್ ಸಿಸ್ಟಮ್ ವಿಚಾರದಲ್ಲಿ ಮುಂದೆ ಬರುವವರು ಹೀಗೆ ಇರುತ್ತಾರೆಂದು ತಿಳಿಯುವುದು ತಪ್ಪಾಗುತ್ತದೆ. ರಾಜ್ಯ ಸರ್ಕಾರದ ರೋಸ್ಟರ್ ಸಿಸ್ಟಮ್ ಏನಿದೆ ಅದರಲ್ಲಿ ಬ್ಯಾಕ್‌ಲಾಗ್ ತುಂಬಲಿಕ್ಕೆ ಔಚಿತ್ಯವಿದೆ. ಪ್ರಧಾನ ಮಂತ್ರಿಗಳು ಹೇಳಿರತಕ್ಕ ಮಾತಂ ರೋಸ್ಟರ್ ಸಿಸ್ಟಮ್‌ಗೆ ಅಡಿ ಬರುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ನಾನು ಬದಲಾಯಿಸಿ ಎಂದು ಹೇಳಲಿಲ್ಲ. ಇರತಕ್ಕ ನೀತಿ ಯಾವುದನ್ನು ನಾವು ಬದಲಾವಣೆ ಮಾಡುವುದಿಲ್ಲ ಎಂದರೆ ಅರ್ಥ ಏನಾಯಿತು? ರೊಸ್ಟರ್ ಸಿಸ್ಟಮ್ ಅಷ್ಟೆ. ರಿಸರ್ವೇಶನ್ ಸಿಸ್ಟಮ್ ಅಷ್ಟೆ, ಪರ್ಸೆಂಟೇಜ್ ಏನು ನಿರ್ಧರಿಸಿದ್ದೇವೆ ಅದರಲ್ಲೂ ಅಷ್ಟೆ ರಾಷ್ಟ್ರ ಮಟ್ಟದಲ್ಲಿ ಅವರು ಯಾವುದೇ ನಿರ್ಧಾರ ಕೈಗೆದುಕೊಳ್ಳಲಿ, ಈಗ ಯಾವುದನ್ನು ನಾವು ಬದಲಾಯಿಸುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ರೋಸ್ಟರ್ ಸಿಸ್ಟಮ್ ಕೆಲವು ಕಡೆ ಅಪ್ಲೈ ಆಗಿದೆ, ಕೆಲವು ಕಡೆ ಕವರ್ ಮಾಡಬೇಕಾಗಿದೆ. ಅಲ್ಲಿಯವರೆಗೆ ರೋಸ್ಟರ್ ಸಿಸ್ಟಮ್ ಅನ್ನು ಮೇಂಟೇನ್ ಮಾಡಬೇಕು. ಬೇರೆ ಬೇರೆ ಇಲಾಖೆಗಳಲ್ಲಿ ರೋಸ್ಟರ್ ಸಿಸ್ಟಮ್ ಅಪ್ಲೈ ಮಾಡಬೇಕು. ರೋಸ್ಟರ್ ಸಿಸ್ಟಮ್ ಎಲ್ಲೆಲ್ಲಿ ಕವರ್ ಆಗಿಲ್ಲ ಅಲ್ಲೆಲ್ಲಾ ಎಕ್ಸ್‌ಟೆಂಡ್ ಮಾಡತಕ್ಕ ವಿಚಾರದಲ್ಲಿ ಪ್ರಧಾನ ಮಂತ್ರಿಗಳು ಅಡ್ಡಿ ಬರತಕ್ಕ ಮಾತನ್ನು ಹೇಳಿಲ್ಲ. ಆ ಅರ್ಥ ನಿಮಗೂ ಆದರೆ ಅಡ್ಡಿಯಿಲ್ಲ. ಕೆಲವು ಜನ ಈಗ ಸೇರಿಕೊಂಡು ಪಾಂಪ್ಲೆಟ್ಸ್ ಏನೂ ಪ್ರಿಂಟ್ ಮಾಡಿಸಿದ್ದಾರೆ ಅದಕ್ಕೆ ಪ್ರಾಮುಖ್ಯತೆ ಕೊಡಬಾರದು. ಶ್ರೀಮತಿ ಪದ್ಮಾವತಿ ವಿಠಲ್‌ರಾವ್ ಬಸವನಗುಡಿ ಮತಕ್ಷೇತ್ರದಲ್ಲಿದ್ದಾರೆಂದು ಕೇಳಿದ್ದೇನೆ.

ಶ್ರೀ ಎಂ. ರಘುಪತಿ.— ಅವರು ಬಸವನಗುಡಿ ಮತಕ್ಷೇತ್ರದಲ್ಲಿಲ್ಲ, ಜಯಮಹಲ್‌ನಲ್ಲಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅದು ಬಸವನಗುಡಿ ಕ್ಷೇತ್ರದ ಪಕ್ಕದಲ್ಲಿ ಬರುತ್ತದೆ.

ಶ್ರೀ ಎಂ. ರಘುಪತಿ. —ಬಸವನಗುಡಿ ಮತಕ್ಷೇತ್ರ ಇರುವುದು ವಿಧಾನಸೌಧದ ದಕ್ಷಿಣಕ್ಕೆ, ಜಯಂ ಮಹಲ್ ಮತಕ್ಷೇತ್ರ ಇರುವುದು ವಿಧಾನಸೌಧದ ಉತ್ತರದ ಕಡೆಗೆ.

ಶ್ರೀ ಎಸ್. ಬಂಗಾರಪ್ಪ.—ಶ್ರೀಮತಿ ಪದ್ಮಾವತಿ ವಿಠಲರಾವ್ ಅವರು ಮುಖ್ಯಮಂತ್ರಿಗಳ ಸಂಪರ್ಕ ಇಟ್ಟುಕೊಂಡು, ಹಲವಾರು ಸೌಲಭ್ಯ ಪಡೆಯಬೇಕೆಂದು ಪ್ರಯತ್ನಿಸಿರಬಹುದು. ಹಲವಾರು ಸೌಲಭ್ಯಗಳನ್ನು ಪಡೆಯಬೇಕೆಂದು ಅವರು ಬಂದು ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿರಬಹುದು. ಆ ದೃಷ್ಟಿಯಿಂದ ಪರಿಚಯ ಚೆನ್ನಾಗಿರಬಹುದು. ಅವರನ್ನು ಒಂದು ಸಾರಿ ಕರೆಯಿಸಿ, ಅವರು ಜಯ ಮಹಲ್‌ನಲ್ಲಿ ಇರಲಿ, ಭಾರತೀನಗರದಲ್ಲಿ ಇರಲಿ ಅವರಿಗೆ ತಾವು ಬುದ್ಧಿ ಮಾತು ಹೇಳಿದರೆ ಒಳ್ಳೆಯದು.

ಅಧ್ಯಕ್ಷರು.— ವಿರೋಧಪಕ್ಷದ ನಾಯಕರು ಮತ್ತು ಮುಖ್ಯಮಂತ್ರಿಗಳು ಇಬ್ಬರೂ ಸೇರಿ ಕರೆಯಿಸಿ ಬುದ್ಧಿ ಮಾತು ಹೇಳಿ.

ಕುಂದಾಪುರದ ಸರ್ಕಾರಿ ಆಸ್ಪತ್ರೆಗೆ ಅಗತ್ಯವಿರುವ ರಿಪೇರಿ

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ಮಾನ್ಯ ಅಧ್ಯಕ್ಷರೇ, ಕುಂದಾಪುರದ ಸರಕಾರಿ ಆಸ್ಪತ್ರೆಗೆ ಅಗತ್ಯ ವಿರುವ ತುರ್ತು ರಿಪೇರಿ ಕುರಿತು. ಈ ಬಗ್ಗೆ ಉತ್ತರ ಕೊಡಲು ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇರುವುದರಿಂದ ನಾನು ಈ ಸದನದ ಸಮಯವನ್ನು ಹಾಳುಮಾಡುವುದಕ್ಕೆ ಇಷ್ಟ ಪಡುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಉತ್ತರ ಕೇಳುವುದಕ್ಕೆ ಇಷ್ಟವಿಲ್ಲವೆಂದು ಹೇಳುತ್ತಿದ್ದಾರೆ.

ಬಳ್ಳಾರಿಯಲ್ಲಿ ಪಿ. ಜಿ. ಸೆಂಟರನ್ನು ತೆರೆಯುವುದು

ಶ್ರೀ ಸಿ.ಎಂ. ರೇವಣಸಿದ್ಧಯ್ಯ — ಮಾನ್ಯ ಅಧ್ಯಕ್ಷರೆ, ಬಳ್ಳಾರಿ ಜಿಲ್ಲೆಯು ಮೊದಲು ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯೊಳಗಿತ್ತು. ಈ ಜಿಲ್ಲೆಗೆ ವಿಶ್ವವಿದ್ಯಾಲಯದಲ್ಲಿ ಯೋಗ್ಯ ಪ್ರಾಶಸ್ತ್ಯ ಕೊಡಲಾಗಿತ್ತು. ಆದರೆ ಗುಲ್ಬರ್ಗ ವಿಶ್ವವಿದ್ಯಾಲಯವನ್ನು ಆರಂಭಿಸಲು ಬಳ್ಳಾರಿ ಇಲ್ಲದೆ ಅದಕ್ಕೆ ಸಾಧ್ಯತೆ ಇರಲಿಲ್ಲ. ಆ ಕಾರಣದಿಂದ ಬಳ್ಳಾರಿಯನ್ನು ಮುಂದೆ ಉತ್ತಮ ಸ್ಥಾನಮಾನ ಕೊಡುವ

ಆಶ್ವಾಸನೆಯಿಂದ, ಬಳ್ಳಾರಿಯನ್ನು ಗುಲ್ಬರ್ಗಕ್ಕೆ ಸೇರಿಸಿಕೊಂಡರು. ಅದು ಉತ್ತಮ ಪಿ.ಜಿ. ಸೆಂಟರು ಆಗಲು ಎಲ್ಲಾ ಅರ್ಹತೆ, ಅಗತ್ಯಗಳಿವೆ. ಈ ಬಗ್ಗೆ ಶ್ರೀ ಆಡ್ಕೆಯವರ ಸಮಿತಿ ವರದಿಯ ಪ್ರಕಾರ ಬಳ್ಳಾರಿ ಜಿಲ್ಲೆಯನ್ನು ಗುಲ್ಬರ್ಗ ವಿಶ್ವ ವಿದ್ಯಾಲಯಕ್ಕೆ ವರ್ಗಾಯಿಸಲಾಯಿತು.

ಆದರೆ ಈಗ ಪಿ.ಜಿ. ಕೇಂದ್ರವನ್ನು ಸಂಡೂರಿನ ನಂದಿಹಳ್ಳಿಯಲ್ಲಿ ಆರಂಭಿಸಿ ಬಳ್ಳಾರಿಯನ್ನು ಕೈಬಿಟ್ಟಿರುವುದು ಪೂರ್ಣ ಅಸಮಂಜಸವಿದೆ. ಈ ಬಗ್ಗೆ ಬಳ್ಳಾರಿಯ ಜನತೆಗೆ ನ್ಯಾಯವಾಗಿ ಶ್ರೀ ಡಿ. ಆರ್. ಮನ್ನಾರ್‌ರವರ ಅಧ್ಯಕ್ಷತೆಯಲ್ಲಿ ಬಳ್ಳಾರಿಗೆ ಪಿ.ಜಿ. ಕೇಂದ್ರ ಕೊಡಲು ಒತ್ತಾಯಿಸಿ ಸಮಿತಿಯನ್ನು ರಚಿಸಿ ತಾರೀಖು ೨೭–೭–೮೫ಕ್ಕೆ ಅಹಿಂಸಾತ್ಮಕ ಚಳುವಳಿ ಮೂಲಕ 'ಬಳ್ಳಾರಿ ಬಂದ್' ಕಾರ್ಯಕ್ರಮ ಹಾಕಿಕೊಂಡಿದ್ದರು,

ತಾರೀಖು ೨೫–೭–೮೫ರಂದು ಬಳ್ಳಾರಿಗೆ ಭೇಟಿ ನೀಡಿದ ಮಾನ್ಯ ಎಸ್.ಆರ್. ಬೊಮ್ಮಾಯಿ ಕಂದಾಯ ಸಚಿವರು ಹಾಗೂ ಮಾನ್ಯ ಎಂ. ಪಿ. ಪ್ರಕಾಶ್, ಕೃಷಿ ಸಚಿವರು ಕೂಡಿ ಬಳ್ಳಾರಿಯಲ್ಲಿಯೇ ಪಿ.ಜಿ. ಕೇಂದ್ರ ಆರಂಭಿಸಲಾಗುವುದು ಎಂದು ಆಶ್ವಾಸನೆ ಕೊಟ್ಟ ನಂತರ ಚಳುವಳಿ ಹಿಂತೆಗೆದುಕೊಂಡರು ಇದಾದ ನಂತರವೂ ಜಿಲ್ಲೆಯ ಸಚಿವರು ಶಾಸಕರು ಸೇರಿ ಮಾನ್ಯ ಮುಖ್ಯಮಂತ್ರಿಗಳನ್ನು ಕಂಡಾಗ ಆಗಬಹುದೆಂದು ಆಶ್ವಾಸನೆಯನ್ನು ಇತ್ತಿದ್ದಾರೆ.

ಆದರೆ ಈಗ ಸಂಡೂರಿನಲ್ಲಿ ಮಾತ್ರ ಪಿ.ಜಿ. ತರಗತಿಗಳನ್ನು ಆರಂಭಿಸಿ ಬಳ್ಳಾರಿಯನ್ನು ಕೈಬಿಟ್ಟಿರುವುದು ಬಳ್ಳಾರಿ ಜನತೆಗೆ ಬಹಳ ಅತೃಪ್ತಿಯಾಗಿದೆ ಆದರು ಮತ್ತೆ ವಿನಾಕಾರಣ ಚಳುವಳಿ ಆಹಿತಕರ ಘಟನೆಗಳಿಗೆ ಕಾರಣವಾಗದಿರಲು ಪಿ. ಜಿ. ಕೇಂದ್ರವನ್ನು ಬಳ್ಳಾರಿಯಲ್ಲಿ ಈ ವರ್ಷವೇ ಆರಂಭಿಸುವುದು ಅತ್ಯಗತ್ಯವೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸ್ನಾತಕೋತ್ತರ ಕೇಂದ್ರವನ್ನು ತೆರೆಯಬೇಕೆಂದು ಕೇಳುತ್ತಿದ್ದಾರೆ ಅದರ ಬಗ್ಗೆ ನಾನು ಈಗಾಗಲೇ ವಿವರಣೆ ನನ್ನು ಕೊಟ್ಟಿದ್ದೇನೆ. ಆ ಬಗ್ಗೆ ಸದನಕ್ಕೆ ಪುನಃ ವಿವರಣೆ ಕೊಡಬೇಕಾಗಿಲ್ಲ. ಮಾನ್ಯ ಸದಸ್ಯರು ವಿಶೇಷವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಒಂದು ಸ್ನಾತಕೋತ್ತರ ಕೇಂದ್ರವನ್ನು ತೆರೆಯಬೇಕಾದರೆ ಸರ್ಕಾರಕ್ಕೆ ಸುಮಾರು ೧ ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆ. ಯು.ಜಿ.ಸಿ. ಯಿಂದ ಮಂಗಳೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯಗಳಿಗೆ ಮಾನ್ಯತೆ ಸಿಕ್ಕಿಲ್ಲ ನಮಗೆ ಹಣದ ಅಭಾವವಿದೆ. ಸ್ನಾತಕೋತ್ತರ ಕೇಂದ್ರವನ್ನು ತೆರೆಯಬೇಕೆನ್ನುವ ನಿಯೋಗ ಮಾನ್ಯ ಮುಖ್ಯಮಂತ್ರಿಗಳನ್ನು ಕಂಡಾಗ ನಾವು ಒಂದು ಕರಾರನ್ನು ಹಾಕಿದ್ದೇವೆ. ಅದೇನೆಂದರೆ ನೀವು ೫೦ ಲಕ್ಷ ರೂಪಾಯಿಗಳನ್ನು ಕೊಡಿದರೆ ಹೊರತು ನಾವು ಅಲ್ಲಿ ಸ್ನಾತಕೋತ್ತರ ಕೇಂದ್ರವನ್ನು ತೆರೆಯುವುದಕ್ಕೆ ಸಾಧ್ಯವಿಲ್ಲವೆಂದು. ನಮಗೆ ಹಣದ ಮುಗ್ಗಟ್ಟು ಇರುವುದರಿಂದ ನೀವು ೫೦ ಲಕ್ಷ ರೂಪಾಯಿಗಳನ್ನು ಕೊಟ್ಟರೆ ನಮ್ಮದೇ ಆದ ೨೦೦ ಎಕರೆ ಭೂಮಿ ಇದೆ, ನೀವು ೫೦ ಲಕ್ಷ ರೂಪಾಯಿಗಳನ್ನು ಕೂಡಿಸಿಕೊಟ್ಟ ತಕ್ಷಣ ಅದರ ಕಾರ್ಯಾರಂಭವನ್ನು ಮಾಡುತ್ತೇವೆಂದು ತಿಳಿಸುತ್ತೇನೆ.

Conduct of B.E. Degree Examinations

SRI. K. H. SRINIVAS.— Sir, According to Bangalore University regulation of the B. E. Degree course, the course of study shall extend over a period of four years Each academic year will ordinarily begin on 15th of June and closed on 15th of March of each year, with winter and summer vacation to be prescribed by the University. As per regulation the academic year will extend upto 9 months. As in the Engineering Colleges in Bangalore University the fourth year (final) B.E. Class have started from March 11, 1985. No examination can be held as per rules before 10th December 1985. As it is the examinations are scheduled to be held in September i.e., within